# ಸುಲಭ ವಿಚ್ಛೇದನ ಸರಿಯೆ?

ವಿವಾಹ ಕಾನೂನಿನ ತಿದ್ದುಪಡಿ ಮಸೂದೆ ಈಗ ರಾಜ್ಯಸಭೆಯ ಮುಂದೆ ಚರ್ಚೆಗೆ ಬಂದಿದೆ. ಹಿಂದೂ ವಿವಾಹ ಕಾಯಿದೆ– 2007 ಮತ್ತು 1954ರ ವಿಶೇಷ ವಿವಾಹ ಕಾಯಿದೆಗಳ ಅಡಿಯಲ್ಲಿ ರಚನೆಯಾಗಿರುವ ಕಾನೂನುಗಳನ್ನು ಇನ್ನಷ್ಟು ಸರಳಗೊಳಿಸುವುದು ತಿದ್ದುಪಡಿ ಮಸೂದೆಯ ಉದ್ದೇಶ.

ಭಾರತೀಯ ಕುಟುಂಬ ವ್ಯವಸ್ಥೆ ಮತ್ತು ವೈವಾಹಿಕ ಸಂಬಂಧಗಳ ಅಡಿಪಾಯ ಸಡಿಲವಾಗುತ್ತಿದೆ. ಕೈಗಾರಿಕೀರಣದ ನಂತರ ಭಾರತೀಯ ಸಾಮಾಜಿಕ ವ್ಯವಸ್ಥೆ ಬದಲಾವಣೆಗೆ ತೆರೆದುಕೊಂಡಿತು. ಅನ್ಯ ಸಂಸ್ಕೃತಿಗಳ ಪ್ರಭಾವದಿಂದ ಅವಿಭಕ್ತ ಕುಟುಂಬ ವ್ಯವಸ್ಥೆ ದುರ್ಬಲಗೊಳ್ಳಲು ಆರಂಭವಾಯಿತು. ಜಾಗತೀಕರಣ ಪ್ರಕ್ರಿಯೆ ಆರಂಭವಾದ ನಂತರ ವೈವಾಹಿಕ ಸಂಬಂಧಗಳು ತೆಳುವಾಗತೊಡಗಿದವು. ಈಗ ಗಂಡು ಹೆಣ್ಣು ಇಬ್ಬರೂ ಸಮಾನರು. ಆರ್ಥಿಕ ಸ್ವಾತಂತ್ರ್ಯ ಮತ್ತು ಆಧುನಿಕತೆಯನ್ನು ಮೈಗೂಡಿಸಿಕೊಂಡ ಹೊಸ ತಲೆಮಾರಿನ ಯುವಜನರು ವಿವಾಹವಾಗದೆ ಒಟ್ಟಿಗೆ ಬದುಕುವ ಹೊಸ ವ್ಯವಸ್ಥೆಯತ್ತ ಆಕರ್ಷಿತರಾಗುತ್ತಿದ್ದಾರೆ. ಇದು ಈ ಕಾಲದ ಜೀವನ ಕ್ರಮ ಎಂಬುದು ಅವರ ನಂಬಿಕೆ. ಒಟ್ಟಿಗೆ ಬದುಕುವುದು ಸಾಧ್ಯವಿಲ್ಲ ಅನ್ನಿಸಿದರೆ ಬೇರೆಯಾಗುವುದು ಸುಲಭ. ಅದಕ್ಕೆ ಯಾರ ಒಪ್ಪಿಗೆ ಬೇಕಿಲ್ಲ. ಇಂಥ ವ್ಯವಸ್ಥೆಯನ್ನು ನಮ್ಮ ಸಮಾಜ ಒಪ್ಪಿಕೊಳ್ಳುವ ಅನಿವಾರ್ಯತೆ ಇದೆ. ಆದರೆ ಸಾಂಪ್ರದಾಯಿಕ ಮನಸ್ಸುಗಳು ಆ ವ್ಯವಸ್ಥೆಯನ್ನು ಒಪ್ಪಲು ಸಿದ್ಧವಿಲ್ಲ.

ಬಹುಸಂಖ್ಯಾತ ಭಾರತೀಯರಿಗೆ ಸಾವಿರಾರು ವರ್ಷಗಳಿಂದ ನಮ್ಮ ಸಾಮಾಜಿಕ ವ್ಯವಸ್ಥೆ ರೂಢಿಸಿಕೊಂಡು ಬಂದ ವಿವಾಹ ಪದ್ಧತಿಯಲ್ಲಿ ಅಪಾರ ನಂಬಿಕೆ. ಹೊಸ ಬೆಳವಣಿಗೆ ಎಂದರೆ ಸಾಂಪ್ರದಾಯಿಕ ಮನೋಧರ್ಮದ ಗಂಡು ಹೆಣ್ಣುಗಳಲ್ಲೂ ಈಗ ವೈವಾಹಿಕ ಸಂಬಂಧಗಳನ್ನು ಕಡಿದುಕೊಳ್ಳುವ ಧಾವಂತ ಕಂಡು ಬರುತ್ತಿದೆ. ಇದು ಪ್ರಸ್ತುತ ಕಾಲಘಟ್ಟದ ದುರದೃಷ್ಟ. ವಿಚ್ಛೇದನ ಅರ್ಜಿಗಳ ಇತ್ಯರ್ಥಕ್ಕಾಗಿಯೇ ಸರ್ಕಾರ ಕುಟುಂಬ ನ್ಯಾಯಾಲಯಗಳನ್ನು ಸ್ಥಾಪಿಸಿದೆ. ಸಣ್ಣ ಪುಟ್ಟ ಕಾರಣಗಳಿಗಾಗಿ ವಿವಾಹ ಸಂಬಂಧಗಳನ್ನು ಮುರಿದುಕೊಳ್ಳುವ ಅಮೆರಿಕಾ ಮತ್ತಿತರ ಮುಂದುವರಿದ ದೇಶಗಳ ಜನರಂತೆ ಭಾರತೀಯರೂ ಅಂತಹ ಮನಸ್ಥಿತಿ ಬೆಳೆಸಿಕೊಳ್ಳುತ್ತಿದ್ದಾರೆ. ಪತಿ– ಪತ್ನಿಯರ ನಡುವಣ ಸಂಬಂಧ ಜನ್ಮಾಂತರಗಳದ್ದು ಎಂಬ ಮಾತು ಈಗ ನಗೆಪಾಟಲಿಗೆ ಗುರಿಯಾಗಿದೆ. 'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ'ಎಂಬ ಗಾದೆ ಗಂಡು– ಹೆಣ್ಣಿನ ನಡುವಣ ಹೊಂದಾಣಿಕೆಯ ಅನಿವಾರ್ಯತೆಯನ್ನು ಧ್ವನಿಸುತ್ತದೆ. ಹೊಂದಾಣಿಕೆ ಸಾಧ್ಯವಾಗದೆ ಸಂಬಂಧಗಳನ್ನೇ ಕಡಿದುಕೊಳ್ಳುವ ಪ್ರಯತ್ನಗಳು ಹೆಚ್ಚಾಗಿವೆ. ಹೀಗಾಗಿ ವಿಚ್ಛೇದನಗಳ ಸಂಖ್ಯೆ ಹೆಚ್ಚುತ್ತಲೇ ಇದೆ.

ವಿಚ್ಛೇದನ ಪಡೆಯುವ ಕಾನೂನು ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಿಸುವ ಪ್ರಯತ್ನಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ. ವಿವಾಹ ಕಾನೂನಿನ ತಿದ್ದುಪಡಿ ಮಸೂದೆ ಈಗ ರಾಜ್ಯಸಭೆಯ ಮುಂದೆ ಚರ್ಚೆಗೆ ಬಂದಿದೆ. ಹಿಂದೂ ವಿವಾಹ ಕಾಯಿದೆ– 2007 ಮತ್ತು 1954ರ ವಿಶೇಷ ವಿವಾಹ ಕಾಯಿದೆಗಳ ಅಡಿಯಲ್ಲಿ ರಚನೆಯಾಗಿರುವ ಕಾನೂನುಗಳನ್ನು ಇನ್ನಷ್ಟು ಸರಳಗೊಳಿಸುವುದು ತಿದ್ದುಪಡಿ ಮಸೂದೆಯ ಉದ್ದೇಶ. ಈ ಪ್ರಯತ್ನಕ್ಕೆ ಸಂಸತ್ತು ಒಪ್ಪಿಗೆ ನೀಡಿದರೆ ವಿಚ್ಛೇದನ ಪಡೆಯುವುದು ಸುಲಭವಾಗುತ್ತದೆ. ಆದರೆ ಈ ತಿದ್ದುಪಡಿ ಮಸೂದೆ ಮಹಿಳೆಯರ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂಬ ಆತಂಕವನ್ನು ಭಾರತೀಯ ಜನತಾ ಪಕ್ಷ ವ್ಯಕ್ತಪಡಿಸಿದೆ. ಆ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಈ ಮಧ್ಯೆ  ಶಿವಮೊಗ್ಗ ಜಿಲ್ಲೆಯ ಕೌಟುಂಬಿಕ ನ್ಯಾಯಾಲಯವೊಂದು ನೀಡಿದ್ದ ವಿವಾಹ ವಿಚ್ಛೇದನ ಆದೇಶವನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿದೆ. ಪತಿ– ಪತ್ನಿಯರ ನಡುವೆ ಅಸಮಾಧಾನಕ್ಕೆ ಕಾರಣವಾದ ಸಂಗತಿಗಳನ್ನು ತಿಳಿದುಕೊಂಡು ಅವನ್ನು ಸಮಾಲೋಚನೆ (ಕೌನ್ಸೆಲಿಂಗ್) ಮೂಲಕ ಬಗೆಹರಿಸಿ ಅವರನ್ನು ಒಂದುಗೂಡಿಸಬೇಕೇ ಹೊರತು ವಿಚ್ಛೇದನ ನೀಡಬಾರದು ಎಂದು ಕಿವಿಮಾತು ಹೇಳಿದೆ. ವಿಚ್ಛೇದನ ಅರ್ಜಿಗಳನ್ನು ತ್ವರಿತವಾಗಿ ವಿಲೇ ಮಾಡುವುದೇ ನ್ಯಾಯಾಲಯಗಳ ಉದ್ದೇಶ ಆಗಬಾರದು ಎಂದೂ ಹೇಳಿದೆ. ಹೈಕೋರ್ಟ್ ಈ ನಿಲುವು  ಸ್ವಾಗತಾರ್ಹ.

ದಂಪತಿ ನಡುವಿನ ಭಿನ್ನಾಭಿಪ್ರಾಯಗಳನ್ನು ಕುಟುಂಬದ ಮುಖ್ಯಸ್ಥರು ಕೂತು ಮಾತುಕತೆಯ ಮೂಲಕ ಬಗೆಹರಿಸುವ ವ್ಯವಸ್ಥೆ ಹೊಸದಲ್ಲ. ಧಾರ್ಮಿಕ ಮುಖಂಡರು, ಜಾತಿ ಸಂಘಟನೆಗಳು ಮತ್ತು ಕುಟುಂಬದ ಹಿರಿಯರು ಈ ಕೆಲಸ ಮಾಡುತ್ತಲೇ ಇದ್ದಾರೆ. ವೈವಾಹಿಕ ಸಂಬಂಧಗಳನ್ನು ಕಡಿದುಕೊಳ್ಳುವ ಮೊದಲು ಮಕ್ಕಳ ಜವಾಬ್ದಾರಿ, ವಿಚ್ಛೇದನದ ನಂತರ ಆರ್ಥಿಕ ಹಾಗೂ ಸಾಮಾಜಿಕ ಅಭದ್ರತೆ ಎದುರಿಸುವ ವಿಚ್ಛೇದಿತ ಪತ್ನಿಗೆ ಪರಿಹಾರ ನೀಡುವುದು ನಿರ್ಧಾರವಾಗ ಬೇಕಾಗಿದೆ.  ಅದರ ಇತ್ಯರ್ಥ ನ್ಯಾಯಾಲಯಕ್ಕೆ ಮಾತ್ರವಲ್ಲ, ವಿಚ್ಛೇದನ ಬಯಸಿದವರಿಗೂ ಒಂದು ಸಮಸ್ಯೆಯೇ. ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಮತ್ತು ಗಂಡ–ಹೆಂಡತಿಯ ಬಾಲಿಶ ನಡವಳಿಕೆಗಳು ವಿಚ್ಛೇದನಕ್ಕೆ ಕಾರಣವಾಗಬಾರದು. ವಿಚ್ಛೇದನ ಬಯಸಿದ ದಂಪತಿ ಜೊತೆ ಸಮಾಲೋಚನೆ ನಡೆಸಿ ಅವರನ್ನು ಒಂದಾಗಿ ಬಾಳುವತ್ತ ಮಾರ್ಗದರ್ಶನ ಮಾಡುವುದಕ್ಕೆ ಹೆಚ್ಚಿನ ಒತ್ತು ಸಿಗಬೇಕು. ಅದು ಈ ಕಾಲದ ಅಗತ್ಯ.

■ ಪ್ರೇಮಕುಮಾರ್ ಹರಿಯಬ್ಬೆ

